ಈ ಚತುರ್ಮಧ್ಯೆ ಇರುವ ಕಟ್ಟಿದ ಕಟ್ಟಡ ಅಂಕಣ 65 ಮಧ್ಯೆ ತೊಟ್ಟಿ ಖಾಲೀ ಜಮೀನು ಅಂಕಣ 2 ಸಹ ಬಾಲತೀ ಇಸವೀ ಏಪ್ರಿಲ್ 7ನೇ ತಾರೀಖು ಸೋಮವಾರ ಹಗಲು 12 ಘಂಟೆ ಲಾಗಾಯತು 4 ಘಂಟೆ ವರಿವಿಗೂ ಸದರೀ ಕಟ್ಟಡದ ಬಳಿ ತಾಲ್ಲೂಕು ಆಫಿಸರವರಿಂದ ಹರಾಜು ಹಾಕಲ್ಪಡುತ್ತೆ. ಯಿಷ್ಟವುಳ್ಳ ಜನಗಳು ಸದರೀ ಟೈಮಿಗೆ ಸರಿಯಾಗಿ ಕಟ್ಟಡದ ಬಳಿ ಹಾಜರ್ ಯಿದ್ದು ಧಾರಾಳವಾಗಿ ಚಡ ಸವಾಲ್ ಮಾಡಬಹುದು. ಹರಾಜ್ ಖೈದಾದ ನಂತರ ಮಾಡತಕ್ಕ ಸವಾಲ್‌ಗಳು ಅಂಗೀಕರಿಸುವದಿಲ್ಲ. ಹರಾಜಿನಲ್ಲಿ ಅಖೈರ್ ಸವಾಲ್ ನಿಂತ ದರಖಾಸ್ತುದಾರನು 4ರಲ್ಲಿ ಪೊಂದು ಹಿಸ್ಸೆ ಮೊಬಲಗು ತಕ್ಷಣ ಹಾಜರ್ ಮಾಡಿ ರೀತಿ ಪಡೆಯಬೇಕು. ಬಾಕೀ ಮೂರು ಹಿಸ್ಸೇ ಮೊಬಲಗಿಗೆ ಖಾತರ ಜಾಮೀನು ಕೊಡಬೇಕು. ಈ ಹರಾಜು ಮಂಜೂರಿಯು ಡೆಪ್ಯುಟಿ ಕಮ್ಮಿಷನ್ನರ್ ಸಾಹೆಬರವರ, ವ ದಿವಾನ್ ಸಾಹೆಬರವರ ಮಂಜೂರಿಗೆ ವಳಪಟ್ಟದ್ದಾಗಿದೆ. ಮಂಜೂರಿ ಹುಕ್ಕುಂ ಬಂದು ಬಾಕೀ ಮೊಬಲಗಿಗೆ ತಗಾದೆ ಮಾಡಿದ ಪೂಡನೆಯೇ ಪೂರಾ ಮೊಬಲಗು ದರಖಾಸ್ತುದಾರನಾಗಲಿ ಜಾಮೀರ್ದಾರನಾಗಲಿ ಕೊಟ್ಟು ರೀದಿ ಪಡಿಯಬೇಕು. ಹಾಗೆ ಮೊಬಲಗು ಕೊಡದೆ ಯಿದ್ದರೆ ದುಸರಾ ಹರಾಜು ಆಗುವದರಲ್ಲಿ ಕಮ್ಮಿ ಬೀಳತಕ್ಕ ಮೊಬಲಗು ಅವ್ವಲ್ ದರಖಾಸ್ತುದಾರನು ಜಾಮೀನುದಾರನು ಸಹ ತೆರಬೇಕಾಗಿರುತ್ತೆ. ಈ ಮೊಬಲಗು ಇವರ ಚರ ಯಾ ಸ್ಥಿರಸ್ವತ್ತುಗಳ ಮೇಲೆ ವಿಲೇ ಮಾಡಲ್ಪಡುತ್ತೆ. ಶಿವಾಯಿ ಡಿಪಾಜಿಟ್ ಯಿಟ್ಟು ಯಿರುವ ಹಣವು ಸರಕಾರಕ್ಕೆ ದಂಡವಾಗಿ ಸೇರಿಸಿಕ್ಕೊಳ್ಳಲಾಧೀತು.

ತಾರೀಖು 16ನೇ ಮಾಹೇ ಫಿಬ್ರವರೀ ಸ್ರ 1884.

ಡಿ. ಶಾಮರಾವ್,
ಅಮಲ್ದಾರ್.

## ಬೆಂಗಳೂರು ಡಿಸ್ಟ್ರಿಕ್ಟು.

ತಾರೀಖು 13ನೇ ಮಾರ್ಚೀ 1884.

ಇದರಿಂದ ತಿಳಿಯಪಡಿಸುವದೇನಂದರೆ, ಕಾನಕಾನಹಳ್ಳಿ ಸಬ್ ರಿಜಿಸ್ಟ್ರೀ ಆಫೀಸಿನಲ್ಲಿ ಬೇವಾರಸಾಗಿ ಕೆಳಗೆ ವಿವರಿಸೋಣಾದ ದಸ್ತೈವಜನ್ನು ಹಾಜರ್‌ಮಾಡಿದವನೇಯಾಗಲಿ ಅಥವಾ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರನೇಯಾಗಲೀ ಈ ನೋಟೀಸ್ ತಾರೀಖು ಲಾಗಾಯಿತು ಎಂದು ತಿಂಗಳೊಳಗಾಗಿ ಸಬ್ ರಿಜಿಸ್ಟ್ರಾರ್ ರೂಬರೂಬ ಹಾಜರಾಗಿ ಅದನ್ನು ವಾಪಸು ತೆಗದುಕೊಳ್ಳಬೇಕು ತಪ್ಪಿದರೆ 1877ನೇ ಇಸವಿ 3ನೇ ನಂಬರು ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅದು ನಾಶಪಡಿಸಲ್ಪಡುವದು.

| ನಂಬರ್. | ಬರದು ಕೊಟ್ಟವನ ಹೆಸರು. | ಬರಸಿಕೊಂಡವನ ಹೆಸರು. | ದಸ್ತಾವೇಜು ತಾರೀಖು. | ರಿಜಿಸ್ಟರ್ ಬಗ್ಗೆ ಪಾಡಿದ ತಾರೀಖು. | ರಿಜಿಸ್ಟರ್ ಮಾಡಿದ ತಾರೀಖು. | ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು |
|---|---|---|---|---|---|---|
| 1881–82 2ನೇ ಬುಕ್ಕಿನ ನಂಬರ್ 4 | ಕಾನಖಾನಹಳ್ಳಿ ತಾ॥ ಚಿಕ್ಕ ಮುದವಾಡಿಯಲ್ಲಿ ಇರುವ ವಕ್ಕಲಿಗರ ಕೆಂಚೇಗವ್ವಡನ ಮಗ 1ನೇ ಲಿಂಗೇಗವ್ವಡ ಸೇರಿದ ಲಿಂಗೇಗವ್ವಡನ ಮಗ ಲಿಂಗೇಗವ್ವಡ. | ಕಾನಖಾನಹಳ್ಳಿ ತಾ॥ ಮುದವಾಡಿ ಹೋಬಳಿ ಚಿಕ್ಕ ಮುದವಾಡಿ ದಾಖಲೆ ಅಪ್ಪಾಜಿ ಗವಡನ ದೊಡ್ಡಿಲಿರುವ ವಕ್ಕಲಿಗರ ಹುರಳಿ ಲಿಂಗೇಗವ್ವಡನ ಮೊಮ್ಮಗ ಕೆಂಪೇಗವ್ವಡ ವಳಿಗವ್ವಡ | 10—2—81 | 6—6—81 | 28—11—81 | ಚಿಕ್ಕ ಮುದವಾಡಿ ದಾಖಲೆ ಅಪ್ಪಾಜಿ ಗವ್ವಡನ ದೊಡ್ಡಿಲಿ ಪೂರ್ವಕ್ಕೆ ಅಪ್ಪಾಜಿ ಗವ್ವಡನ ಹೊಲದ ಬದು, ಪಶ್ಚಿಮಕ್ಕೆ ಕೆಂಚೇಗವ್ವಡನ ಪಾಳು ದಕ್ಷಿಣಕ್ಕೆ ಕಾನುಭೋಗನ ಇನಾಂತಿ ಹೊಲದ ಬದು ವೃತ್ತ ರಕ್ಕೆ ಕೆಂಚೇಗವ್ವಡನ ತಿಪ್ಪೆಗುಂಡಿ ಈ ಮಧ್ಯೆ ಇರುವ ಹೆಬಿನ ಮನೆ 100 ರೂಪಾಯಿಗೆ ಕ್ರಯ. |
| ಡಿಟೋ ನಂ. 5 | ಡಿಟೋ ತುಂಗಣಿ ಗ್ರಾ॥ ಮದ್ದೆಲ್ಲಿರುವ ದೇವರಾಜೇ ಅರಸವರ ಮಕ್ಕಳು ಬಾಳಪ್ಪಾಜಿ ರಾಜಪ್ಪಾಜಿ ಸಹ. | ಕೇಲಂ ಜಿಲ್ಲಾ ಏನಾಕೂರಲ್ಲಿ ಇರುವ ನಂಜರಾಜೇ ಅರಸು. | 27—4—81 | 9—5—81 | 28—12—81 | ತುಂಗಣಿ ಗ್ರಾಮದಲ್ಲಿ ಇರುವ 133ನೇ ನಂ. ತೋಟ ಮತ್ತು 180ನೇ ರಡ್ಡಿ ಕೆರೆ ತೋಟ ಸಹ 300 ರೂಪಾಯಿಗೆ ಕ್ರಯ. |

ಇ. ಸಿ. ಷಣ್ಮುಗವೇಲುಪಿಳ್ಳೈ,
ಫಾರ್ ರಿಜಿಸ್ಟ್ರಾರ್.